ಭೂ ಪರಿವರ್ತನೆಯಲ್ಲಿ ಆಗುತ್ತಿರುವ ವಿಳಂಬ

200 (383) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭೂ ಸುಧಾರಣೆ ಕಾಯ್ದೆಯಡಿಯಲ್ಲಿ ಡಿಕ್ಲರೇಷನ್ ಕೊಟ್ಟು ಜಮೀನು ಮಂಜೂರಾದ ರೈತರಿಗೆ ಸದರಿ ಭೂಮಿಗಳಲ್ಲಿ ಮನೆ ಕಟ್ಟಿಕೊಳ್ಳಲು ಭೂ ಪರಿವರ್ತನೆ ಮಾಡುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇರುವುದರಿಂದ ರೈತರು ಹಾಗೂ ಗ್ರಾಮೀಣ ಜನರಿಗೆ ಭೂ ಪರಿವರ್ತನೆ ಮಾಡಿಕೊಳ್ಳಲು ವಿಳಂಭವಾಗುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಸದರಿ ಅಧಿಕಾರವನ್ನು ತಾಲ್ಲೂಕು ತಹಶೀಲ್ದಾರರಿಗೆ ನೀಡುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಉಡುಪಿ ಜಿಲ್ಲೆಯಲ್ಲಿ ಭೂಮಾಪನ ಇಲಾಖೆಯಲ್ಲಿ ಬಾಕಿ ಇರುವ ಎಸ್.ಆರ್.ಟಿ. ಕಡತಗಳು

201 (379) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಭೂಮಾಪನ ಇಲಾಖೆಯ ಕಛೇರಿಗಳಲ್ಲಿ ಎಸ್.ಆರ್.ಟಿ. ಮಾಡಲು ಕಡತಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ ಉಡುಪಿ ಜಿಲ್ಲೆಯ ಯಾವ ಯಾವ ಭೂಮಾಪನ ಇಲಾಖಾ ಕಛೇರಿಗಳಲ್ಲಿ ಎಸ್.ಆರ್.ಟಿ. ಹೊಂದಲು ಎಷ್ಟು ಕಡತಗಳು ಬಾಕಿ ಇವೆ. (ಕಳೆದ ಮೂರು ವರ್ಷಗಳಿಂದ ಎಸ್.ಆರ್.ಟಿ. ಹೊಂದಲು ಬಂದ ಕಡತಗಳ ವರ್ಷವಾರು ವಿವರ ನೀಡುವುದು)

ಇ) ಸದರಿ ಕಡತಗಳಲ್ಲಿ ಎಷ್ಟು ಕಡತಗಳು ಎಸ್.ಆರ್.ಟಿ. ಯಾಗಿರುತ್ತದೆ. (ವರ್ಷವಾರು ವಿವರ ನೀಡುವುದು)

ಈ) ಜಮೀನುಗಳ ಎಸ್.ಆರ್.ಟಿ. ಮಾಡಲು ಜಮೀನಿನ ಮಾಲೀಕರೇ ಅರ್ಜಿ ಸಲ್ಲಿಸಿದ್ದರೆ ಮಾತ್ರ ಎಸ್.ಆರ್.ಟಿ. ಮಾಡಲಾಗುವುದೇ ಅಥವಾ ಜಮೀನುಗಳ ನೋಂದಣಿಯಾದ ನಂತರ ಸದರಿ ಜಮೀನುಗಳು ಕಂದಾಯ ಇಲಾಖೆಯಿಂದ ಭೂಮಾಪನ ಇಲಾಖೆಗೆ ಬಂದ ಮೇಲೆ ಎಸ್.ಆರ್.ಟಿ. ಮಾಡಲಾಗುವುದೇ;

ಉ) ಜಮೀನು ಎಸ್.ಆರ್.ಟಿ. ಮಾಡಲು ಗರಿಷ್ಠ ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಹೌದು, ಬಂದಿದೆ.

ಆ) ಜೂನ್ 2004ರ ಅಂತ್ಯಕ್ಕೆ ಉಡುಪಿ ಜಿಲ್ಲೆಯ ಕುಂದಾಪುರ ಉಡುಪಿ ಮತ್ತು ಕಾರ್ಕಳ ತಾಲ್ಲೂಕುಗಳಲ್ಲಿ ಒಟ್ಟು 7,515 ಎಸ್.ಆರ್.ಟಿ. ಕಡತಗಳು ಬಾಕಿ ಇರುತ್ತವೆ.

ವರ್ಷವಾರು ವಿವರವನ್ನು ತಃಖ್ತೆ–1ರಲ್ಲಿ ನೀಡಲಾಗಿದೆ.

ಇ) ವರ್ಷವಾರು ವಿವರವನ್ನು ತಃಖ್ತೆ–2ಲ್ಲಿ ನೀಡಲಾಗಿದೆ.

ಈ) ಜಮೀನುಗಳ ನೋಂದಣಿಯಾದ ನಂತರ ನೋಂದಣಿ ಇಲಾಖೆಯಿಂದ 'ಜೆ' ಸ್ಲಿಪ್ ತಾಲ್ಲೂಕು ಕಛೇರಿಗೆ ಬರುತ್ತದೆ. ಇದರ ಆಧಾರದಲ್ಲಿ ಮ್ಯುಟೇಷನ್ ಆದೇಶ ಮಾಡಿ ಕಡತವನ್ನು ತಹಸೀಲ್ದಾರರು, ಭೂಮಾಪನ ಇಲಾಖೆಗೆ ಕಳುಹಿಸಿ ಕೊಡುತ್ತಾರೆ.